## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| (1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 1283 |
| (2) ಸದಸ್ಯರ ಹೆಸರು | : ಶ್ರೀ ಆಯನೂರ್ ಮಂಜುನಾಥ್ (ಪದವೀಧರರ ಕ್ಷೇತ್ರ) |
| (3) ಉತ್ತರಿಸುವ ದಿನಾಂಕ | : 21.12.2018. |
| (4) ಉತ್ತರಿಸುವ ಸಚಿವರು | : ಮಾನ್ಯ ನಗರಾಭಿವೃದ್ಧಿ ಹಾಗೂ ವಸತಿ ಸಚಿವರು |

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಶಿವಮೊಗ್ಗ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ಒಟ್ಟು ಕಲ್ಯಾಣ ಮಂದಿರಗಳ ಸಂಖ್ಯೆ ಎಷ್ಟು; ಅವುಗಳು ಯಾವುವು; (ಪೂರ್ಣ ವಿವರ ಒದಗಿಸುವುದು) | ಶಿವಮೊಗ್ಗ ಮಹಾನಗರಪಾಲಿಕೆಯ ವ್ಯಾಪ್ತಿಯಲ್ಲಿ ಒಟ್ಟು 35 ಕಲ್ಯಾಣ ಮಂದಿರಗಳು ಮತ್ತು ಶಾದಿಮಹಲ್‌ಗಳು ಇರುತ್ತವೆ. ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ. |
| ಆ) | ಕಲ್ಯಾಣ ಮಂದಿರಗಳಿಗೆ ಸರ್ಕಾರದಿಂದ ಅಥವಾ ಪಾಲಿಕೆಯಿಂದ ಪ್ರತ್ಯೇಕ ಪರವಾನಗಿ ನೀಡುವ ಪದ್ಧತಿ ಇರುತ್ತದೆಯೇ; ಪರವಾನ್ನಗಿ ನೀಡಲು ಅನುಸರಿಸುತ್ತಿರುವ ಮಾನದಂಡಗಳೇನು; (ಮಾಹಿತಿ ಒದಗಿಸುವುದು)\ | ಕರ್ನಾಟಕ ಮಹಾನಗರಪಾಲಿಕೆಗಳ ಅಧಿನಿಯಮ 1976ರ ಕಲಂ 353, 372, 373, 374 ಮತ್ತು 375ರ ಮಾನದಂಡಗಳ ಪ್ರಕಾರ ವಾಣಿಜ್ಯ ಉದ್ದಿಮೆ ನಡೆಸಲು ಉದ್ದಿಮೆ ಪರವಾನಗಿ ನೀಡಲಾಗುತ್ತದೆ.<br>ಪರವಾನಗಿ ನೀಡಲು ಈ ಕೆಳಕಂಡ ದಾಖಲಾತಿಗಳನ್ನು ಪಡೆಯಲಾಗುತ್ತಿದೆ:-<br>1. ಪಾಸ್‌ಪೋರ್ಟ್ ಸೈಜ್ ಫೋಟೋ 1 ಸಂಖ್ಯೆ.<br>2. ಬಾಡಿಗೆ/ಒಪ್ಪಂದದ ಕರಾರು ಪ್ರತಿ.<br>3. ಆಧಾರ ಪ್ರತಿ.<br>4. ವಿದ್ಯುತ್ ಬಿಲ್ ಪ್ರತಿ.<br>5. ಆಸ್ತಿ ತೆರಿಗೆ ಪಾವತಿ ಪ್ರತಿ.<br>6. ನವೀಕರಣದ ಉದ್ದಿಮೆ ಪರವಾನಿಗೆ ಪ್ರತಿ. |
| ಇ | ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಪರವಾನಗಿ ಪಡೆಯದಿರುವ ಕಲ್ಯಾಣ ಮಂದಿರ ಶಾದಿಮಹಲ್‌ಗಳ ಸಂಖ್ಯೆ ಎಷ್ಟು; ಅವುಗಳು ಯಾವುವು? (ವಿವರ ಒದಗಿಸುವುದು) | ಮೇಲ್ಕಂಡ ಅಧಿನಿಯಮದ ಕಲಂಗಳನ್ವಯ ಪಾಲಿಕೆ ವತಿಯಿಂದ ಎಲ್ಲಾ ಕಲ್ಯಾಣ ಮಂದಿರ ಮತ್ತು ಶಾದಿ ಮಹಲ್‌ಗಳಿಗೆ ಪ್ರತ್ಯೇಕವಾಗಿ ಪರವಾನಗಿ ನೀಡಲಾಗುತ್ತದೆ. ಪ್ರಸ್ತುತ 35 ಕಲ್ಯಾಣ ಮಂದಿರಗಳು ಮತ್ತು ಶಾದಿಮಹಲ್‌ಗಳ ಪೈಕಿ ಕೇವಲ 01 ಸಂಖ್ಯೆಯ ಕಲ್ಯಾಣ ಮಂದಿರವು ಮಾತ್ರ ಸ್ವಯಂ ಪ್ರೇರಿತವಾಗಿ ಅರ್ಜಿ ಸಲ್ಲಿಸಿ ಉದ್ದಿಮೆ ಪರವಾನಗಿ ಪಡೆದಿದ್ದು, ಇನ್ನುಳಿದ 34 ಕಲ್ಯಾಣ ಮಂದಿರಗಳಿಗೆ ಮತ್ತು ಶಾದಿ ಮಹಲ್‌ಗಳಿಗೆ ನಿಯಮಾನುಸಾರ ಉದ್ದಿಮೆ ಪರವಾನಗಿ ಪಡೆಯುವಂತೆ ನೋಟೀಸ್ ನೀಡಿ ಶಿವಮೊಗ್ಗ ಮಹಾನಗರಪಾಲಿಕೆ ವತಿಯಿಂದ ಮುಂದಿನ ಕ್ರಮವಹಿಸಲಾಗುವುದು. |

ಕಡತ ಸಂಖ್ಯೆ: ನಅಇ 51 ಶಿಮಪಾ 2018

(ಯು.ಟಿ.ಖಾದರ್)
ನಗರಾಭಿವೃದ್ಧಿ ಮತ್ತು ವಸತಿ ಸಚಿವರು

ಅನು ೨೦೫

# ಶಿವಮೊಗ್ಗ ಮಹಾನಗರಪಾಲಿಕೆ, ಶಿವಮೊಗ್ಗ

## ಶಿವಮೊಗ್ಗ ನಗರವ್ಯಾಪ್ತಿಯಲ್ಲಿರುವ ಕಲ್ಯಾಣ ಮಂದಿರಗಳ ಪಟ್ಟಿ

| ಕ್ರ. ಸಂ | ಹೆಸರು | ಸ್ಥಳದ ವಿವರ | ಷರಾ |
|---|---|---|---|
| 1 | ತಮಿಳ್ ತಾಯಿ ಕಲ್ಯಾಣ ಮಂದಿರ | ಜೆ.ಹೆಚ್. ಪಟೇಲ್ ಬಡಾವಣೆ | ಉದ್ದಿಮೆ ಪರವಾನಿಗೆ ಪಡೆದಿರುವುದಿಲ್ಲ. |
| 2 | ಶಂಕರ ಮಠ ಸಮುದಾಯ ಭವನ | ಶಂಕರ ಮಠ ರಸ್ತೆ | |
| 3 | ನಂದಿ ಸಮುದಾಯ ಭವನ | ಸವಳಂಗ ರಸ್ತೆ | |
| 4 | ಶ್ರೀಬಸವೇಶ್ವರ ಕಲ್ಯಾಣ ಮಂಟಪ | ಬಸವನ ಗುಡಿ, ಮಲ್ಲಿಕಾರ್ಜುನ ದೇವಸ್ಥಾನ | |
| 5 | ಕೆ.ಇ.ಬಿ. ಸಮುದಾಯ ಭವನ | ಕೆ.ಇ.ಬಿ. ವೃತ್ತ | |
| 6 | ಒಕ್ಕಲಿಗರ ಭವನ | ಬಾಲರಾಜ್ ಅರಸ್ ರಸ್ತೆ | |
| 7 | ಸೇಕ್ರೆಡ್ ಹಾರ್ಟ್ ಸಮುದಾಯ ಭವನ | ಸೇಕ್ರೆಡ್ ಹಾರ್ಟ್ ಚರ್ಚ್, ಬಿ.ಹೆಚ್.ರಸ್ತೆ | |
| 8 | ಗಾಯತ್ರಿ ಮಾಂಗಲ್ಯ ಮಂದಿರ | ಬಿ.ಹೆಚ್. ರಸ್ತೆ | |
| 9 | ಶ್ರೀಮಾತ ಕಲ್ಯಾಣ ಮಂದಿರ | ಬಿ.ಹೆಚ್. ರಸ್ತೆ | |
| 10 | ಚೆಕ್ಕಿನ ಕಲ್ಮಠ | ಹೊಳೆ ಬಸ್ ಸ್ಟಾಪ್ | |
| 11 | ಭಗವಾನ್ ಕಲ್ಯಾಣ ಮಂದಿರ | ಗುಡ್‌ಲಕ್ ಕ್ಯಾಂಟೀನ್ ವೃತ್ತ | |
| 12 | ಶುಭ ಮಂಗಳ ಕಲ್ಯಾಣ ಮಂಟಪ | ವಿನೋಬ ನಗರ, 60 ಅಡಿ ರಸ್ತೆ | |
| 13 | ರಾಘವೇಂದ್ರ ಸ್ವಾಮಿ ಕಲ್ಯಾಣ ಮಂದಿರ | ತಿಲಕ್ ನಗರ | |
| 14 | ವೀರಶೈವ ಕಲ್ಯಾಣ ಮಂದಿರ | ಹಳೇ ತಾಲ್ಲೂಕ್ ಆಫೀಸ್ ರಸ್ತೆ | |
| 15 | ನಿಜಲಿಂಗಪ್ಪ ಸಭಾ ಭವನ | ಹಳೇ ತಾಲ್ಲೂಕ್ ಆಫೀಸ್ ರಸ್ತೆ | |
| 16 | ಜೈನ್ ಕಲ್ಯಾಣ ಮಂದಿರ | ಎಸ್. ಪಿ. ಎಮ್ ರಸ್ತೆ | |
| 17 | ತುಳಜಾಭವಾನಿ ಕಲ್ಯಾಣ ಮಂಟಪ | ಗಾಂಧಿಬಜಾರ್ | |
| 18 | ರಾಮಣ್ಣ ಶ್ರೇಷ್ಠಿ ಪಾರ್ಕ್ ಕಲ್ಯಾಣ ಮಂದಿರ | ಎಸ್. ಪಿ. ಎಮ್ ರಸ್ತೆ | |
| 19 | ಕನ್ನಿಕಾ ಪರಮೇಶ್ವರಿ ಸಮುದಾಯ ಭವನ | ಗಾಂಧಿಬಜಾರ್ | |
| 20 | ಬಸವ ಕಲ್ಯಾಣ ಮಂಟಪ | ಗಾಂಧಿಬಜಾರ್ | |
| 21 | ದೈವಜ್ಞ ಕಲ್ಯಾಣ ಮಂದಿರ | ಜೈಲ್ ರಸ್ತೆ | |
| 22 | ಆದಿಚುಂಚನಗಿರಿ ಸಮುದಾಯ ಭವನ | ಶರಾವತಿ ನಗರ | |
| 23 | ಭಾರತಿ ಸಭಾಭವನ | ಆರ್ ಎಂ ಎಲ್ ನಗರ, ಮುಖ್ಯ ರಸ್ತೆ | |
| 24 | ಸೌಭಾಗ್ಯ ಕಲ್ಯಾಣ ಮಂದಿರ | ಆರ್ ಎಂ ಎಲ್ ನಗರ, ಮುಖ್ಯ ರಸ್ತೆ | |
| 25 | ಸೀತಮ್ಮ ಅನಂತಯ್ಯ ಕಲ್ಯಾಣ ಮಂದಿರ | ಓ. ಟಿ ರಸ್ತೆ | |
| 26 | ಗೌಡ ಸರಸ್ವತಿ ಕಲ್ಯಾಣ ಮಂದಿರ | ಜಿ.ಎಸ್.ಕೆ.ಎಮ್ ರಸ್ತೆ | |
| 27 | ಸತ್ಯ ಪ್ರಮೋದ ಕಲ್ಯಾಣ ಮಂದಿರ | ಬಿ. ಬಿ ಸ್ಟ್ರೀಟ್ | |
| 28 | ರಾಮ ದೇವಸ್ಥಾನ ಕಲ್ಯಾಣ ಮಂದಿರ | ಕೆ.ಆರ್ ಪುರಂ | |
| 29 | ಫಾರೂಕಿಯ ಶಾದಿಮಹಲ್ | ಇಲಿಯಾಸ್ ನಗರ | |
| 30 | ಶಹ ಶಾದಿಮಹಲ್. | ಮಿಲ್ ರಸ್ತೆ, ಇಮಾಮ್‌ಬಡ | |
| 31 | ಶಾದಾಬ್ ಶಾದಿಮಹಲ್ | ಇಮಾಮ್‌ಬಡ | |
| 32 | ನ್ಯಾಮತ್ ಶಾದಿಮಹಲ್ | 100 ಅಡಿ ರಸ್ತೆ, ಸ್ವಾಮಂಡ್ಲಿ | |
| 33 | ಗ್ಯಾಲಕ್ಸಿ ಯುನಿಟಿ ಹಾಲ್ | ವಾದಿ–ಎ–ಹುದಾ | |
| 34 | ಯುನಿಟಿ ಹಾಲ್ | ಆರ್ ಎಂ ಎಲ್ ನಗರ, 2ನೇ ಹಂತ | |
| 35 | ಸರ್ಜಿ ಕನವೆಷನ್ ಹಾಲ್ | ಸವಳಂಗ ರಸ್ತೆ | ಉದ್ದಿಮೆ ಪರವಾನಿಗೆ ಪಡೆದಿರುತ್ತಾರೆ. |

15/12/18
ಆಯುಕ್ತರು.
ಶಿವಮೊಗ್ಗ ಮಹಾನಗರಪಾಲಿಕೆ,
ಶಿವಮೊಗ್ಗ